# ಕರ್ನಾಟಕ ವಿಧಾನ ಪರಿಷತ್ತು

ವಿಷಯ: ವಿಧಾನ ಪರಿಷತ್ತಿನ ಶಾಸಕರ ಭವನದ ವ್ಯಾಪ್ತಿಯಲ್ಲಿರುವ ವಾಣಿಜ್ಯ ಮಳಿಗೆಗಳಿಗೆ ಜಿ.ಎಸ್.ಟಿ. ದರ ಒಳಗೊಂಡಂತೆ ಬಾಡಿಗೆ ದರವನ್ನು ನಿಗದಿಪಡಿಸುವ ಬಗ್ಗೆ.

******

**ಓದಲಾಗಿದೆ:**

1. ವಿಧಾನ ಸಭೆಯ ಕ್ಷೇತ್ರಾಧಿಕಾರಿಯವರ ಟಿಪ್ಪಣಿ ಸಂಖ್ಯೆ:ಕವಿಸಸ/ಶಾಭ/764/ಅಟಿನೀಬ/2022, ದಿನಾಂಕ:01.07.2022 ಹಾಗೂ ಕಡತ ಸಂಖ್ಯೆ:ಕವಿಸಸ/720/ಶಾಭ/ಬಾನಿಪ/2021.
2. ಕಡತ ಸಂ:ಕವಿಪ:ಶಾಭ: ವಾಮಬಾ:888:2022, ಕಂಡಿಕೆ ಸಂ:01 ರಿಂದ 10 ರವರೆಗೆ.

**ಪ್ರಸ್ತಾವನೆ:**

ಕರ್ನಾಟಕ ವಿಧಾನ ಮಂಡಲದ ಶಾಸಕರ ಭವನದ ವ್ಯಾಪ್ತಿಯಲ್ಲಿರುವ ವಾಣಿಜ್ಯ ಮಳಿಗೆಗಳಿಗೆ ಏಕರೂಪದ ಬಾಡಿಗೆಯನ್ನು ನಿಗದಿಪಡಿಸುವ ಸಂಬಂಧ ಮಾನ್ಯ ಸಭಾಪತಿಯವರು ಹಾಗೂ ಮಾನ್ಯ ಸಭಾಧ್ಯಕ್ಷರು ಸಭೆ ಸೇರಿ ಎಲ್ಲಾ ಮಳಿಗೆಗಳ ವಿಸ್ತೀರ್ಣಕ್ಕೆ ಅನುಗುಣವಾಗಿ ಬಾಡಿಗೆ ದರ ಹಾಗೂ ಜಿ.ಎಸ್.ಟಿ.,ದರವನ್ನು ನಿಗದಿಪಡಿಸಲು ತೀರ್ಮಾನಿಸಿರುತ್ತಾರೆ.

ಆ ಪ್ರಕಾರ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಶಾಸಕರ ಭವನದ ವ್ಯಾಪ್ತಿಯಲ್ಲಿರುವ ವಾಣಿಜ್ಯ ಮಳಿಗೆಗಳಿಗೆ ಏಕರೂಪದ ಬಾಡಿಗೆಯನ್ನು ನಿಗದಿಪಡಿಸುವ ಸಂಬಂಧದಲ್ಲಿ ಓದಲಾಗಿರುವ ಕ್ರಮ ಸಂಖ್ಯೆ(1)ರಲ್ಲಿ ಸಲ್ಲಿಸಲಾದ ಪ್ರಸ್ತಾವನೆಗೆ ಕೆಳಕಂಡ ಅಂಶಗಳನ್ನೊಳಗೊಂಡಂತೆ ಷರತ್ತುಗಳನ್ನು ನಿಗದಿಪಡಿಸಿ ಮಾನ್ಯ ಸಭಾಪತಿಯವರು ಹಾಗೂ ಮಾನ್ಯ ಸಭಾಧ್ಯಕ್ಷರು ಪ್ರಸ್ತಾವನೆಯನ್ನು ಅನುಮೋದಿಸಿರುತ್ತಾರೆ.

01 ಲೋಕೋಪಯೋಗಿ ಇಲಾಖೆಯು ನಿಗಧಿಪಡಿಸಿರುವ ದರದ ಸರಾಸರಿ ಶೇ.50ರಷ್ಟನ್ನು ಬಾಡಿಗೆಯಾಗಿ ನಿಗದಿಪಡಿಸಿ ಸದರಿ ಮೊತ್ತಕ್ಕೆ ಜಿ.ಎಸ್.ಟಿ., ದರವನ್ನು ವಿಧಿಸುವುದು.

02 ಬಾಡಿಗೆಗನುಸಾರ ಹತ್ತು ಪಟ್ಟು ಮೊತ್ತವನ್ನು ಮುಂಗಡವಾಗಿ ಪಡೆಯುವುದು

03 ನಿಗದಿಪಡಿಸಲಾಗಿರುವ ಬಾಡಿಗೆಯ ಮೇಲೆ ವರ್ಷಕ್ಕೆ ಶೇ.5ರಷ್ಟು ಬಾಡಿಗೆ ಮೊತ್ತವನ್ನು ಹೆಚ್ಚಿಸುವುದು.

04 ಅಪೆಕ್ಸ್ ಬ್ಯಾಂಕ್, ಎಸ್.ಬಿ.ಐ ಎ.ಟಿ.ಎಂ ಮತ್ತು ಸರ್ಕಾರದ ಸಂಸ್ಥೆಗಳಿಂದ ನಡೆಸಲಾಗುವ ಮಳಿಗೆ ಅಥವಾ ಕಚೇರಿಗಳಿಗೆ ಲೋಕೋಪಯೋಗಿ ಇಲಾಖೆಯ ದರದಲ್ಲಿಯ ಬಾಡಿಗೆಯನ್ನು ನಿಗದಿಪಡಿಸಿ ಜಿ.ಎಸ್.ಟಿ., ದರವನ್ನು ವಿಧಿಸುವುದು.

05 ಒಂದು ವೇಳೆ ಬಾಡಿಗೆದಾರರು ಬಿಟ್ಟು ಹೋದ ಸಂದರ್ಭದಲ್ಲಿ ಬಾಡಿಗೆಯನ್ನು ಪುನರಾವಲೋಕನ ಮಾಡುವುದು.

06 ಶಾಸಕರ ಭವನದ ಆವರಣದಲ್ಲಿರುವ ಹೋಟೆಲ್‌ಗಳ ಬಾಡಿಗೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಆಗಿಂದಾಗ್ಗೆ ಸಲ್ಲಿಸುವುದು.

**ಆದೇಶ ಸಂಖ್ಯೆ:ಕವಿಪ:ಆ-1:20:ವಾಮಬಾ:2022**
**ಬೆಂಗಳೂರು, ದಿನಾಂಕ:14.07.2022**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಶಾಸಕರ ಭವನದ ವ್ಯಾಪ್ತಿಯಲ್ಲಿರುವ ಈ ಕೆಳಕಂಡ ವಾಣಿಜ್ಯ ಮಳಿಗೆಗಳ ಮುಂದೆ ನಮೂದಿಸಿರುವ ಬಾಡಿಗೆ ದರ ಹಾಗೂ ಜಿ.ಎಸ್.ಟಿ., ದರವನ್ನು ನಿಗದಿಪಡಿಸಲಾಗಿದೆ.

| ಕ್ರ.ಸಂ. | ವಾಣಿಜ್ಯ ಮಳಿಗೆಗಳ ಹೆಸರು | ಬಾಡಿಗ ದರ | ಜಿ.ಎಸ್.ಟಿ | ಒಟ್ಟು ಮೊತ್ತ |
|---|---|---|---|---|
| 01 | ಮೆ. ಮಾರುತಿ ಟ್ರಾವೆಲ್ಸ್ | 3.939/- | 709/- | 4.648/- |
| 02. | ನೇತಾಜಿ ಆಯುರ್ವೇದ | 1.765/- | 318/- | 2.083/- |
| 03 | ಧರ್ಮಸ್ಥಳ ಸಿರಿ | 2.284/- | 411/- | 2.695/- |
| 04 | ಕಂಪ್ಯೂಟರ್ ಟೈಪಿಂಗ್ | 2.129/- | 383/- | 2.512/- |
| 05 | ಪರಿಮಳ ಸ್ಟೋರ್ಸ್ | 1.513/- | 272/- | 1.785/- |
| 06 | ದರ್ಜಿ ಅಂಗಡಿ | 4.355/- | 784/- | 5.139/- |
| 07 | ಎಲ್.ಹೆಚ್., ಟೆಕ್ಸ್‌ಟೈಲ್ಸ್ | 1.849/- | 333/- | 2.182/- |
| 08 | ಲಕ್ಷ್ಮಿ ವೆಂಕಟೇಶ್ವರ ಫ್ಲವರ್ಸ್, | 3.064/- | 551/- | 3.615/- |
| 09 | ಮಧು ಎಂಟರ್ ಪ್ರೈಸಸ್ | 3.928/- | 707/- | 4.635/- |
| 10 | ಕಂಪ್ಯೂಟರ್ ಸ್ಟೇಷನರಿ | 2.901/- | 522/- | 3.423/- |
| 11 | ವಿ.ಆರ್.ಎಲ್ ಟ್ರಾವೆಲ್ಸ್ | 1.745/- | 314/- | 2.059/- |
| 12 | ಬಾಳೆಹಣ್ಣಿನ ಅಂಗಡಿ | 1.174/- | 211/- | 1.385/- |
| 13 | ಬೀಡಾ ಅಂಗಡಿ | 373/- | 67/- | 440/- |
| 14 | ಹಾಪ್‌ಕಾಮ್ಸ್ | 2.998/- | 540/- | 3.538/- |
| 15 | ಉತ್ತರ ಕರ್ನಾಟಕ ತಿಂಡಿ | 1.505/- | 271/- | 1.776/- |
| 16 | ಮೆ. ನಂದಿನಿ ಮಳಿಗೆ | 1.874/- | 337/- | 2.211/- |
| 17 | ಕಾಲಭೈರವೇಶ್ವರ ಬಿಸಿನೆಸ್ ಸೆಂಟರ್ | 978/- | 176/- | 1.154/- |

ಅಪೆಕ್ಸ್ ಬ್ಯಾಂಕ್, ಎಸ್.ಬಿ.ಐ ಎ.ಟಿ.ಎಂ ಮತ್ತು ಸರ್ಕಾರದ ಸಂಸ್ಥೆಗಳಿಂದ ನಡೆಸಲಾಗುವ ಮಳಿಗೆ ಅಥವಾ ಕಚೇರಿಗಳಿಗೆ ಲೋಕೋಪಯೋಗಿ ಇಲಾಖೆ ವತಿಯಿಂದ ನಿಗದಿಪಡಿಸಿರುವ ಬಾಡಿಗೆ ದರ ಹಾಗೂ ಜಿ.ಎಸ್.ಟಿ., ದರವನ್ನು ವಿಧಿಸಲಾಗುವುದು ಹಾಗೂ ಶಾಸಕರ ಭವನದ ಆವರಣದಲ್ಲಿರುವ ಹೋಟೆಲ್‌ಗಳಿಗೆ ಬಾಡಿಗೆಯನ್ನು ನಿಗದಿಪಡಿಸುವ ಸಂಬಂಧ ಆಯಾಯ ಸಚಿವಾಲಯದ ಸಕ್ಷಮ ಪ್ರಾಧಿಕಾರದವರ ತೀರ್ಮಾನಕ್ಕೆ ಬಿಡಲಾಗಿದೆ.

ಮಾನ್ಯ ಸಭಾಪತಿಯವರ ಆದೇಶಾನುಸಾರ,

ನಿರ್ಮಲ

**(ಎಸ್. ನಿರ್ಮಲ)**
ಅಪರ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

<u>ಪ್ರತಿಗಳು:</u>

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
3. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.
4. ಅಪರ/ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರುಗಳಿಗೆ, ಕವಿಪ.
5. ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಆಡಳಿತ ಶಾಖೆ/ ಲೆಕ್ಕಪತ್ರ ಶಾಖೆ, ಕವಿಪ.
6. ಕ್ಷೇತ್ರಾಧಿಕಾರಿ, ಶಾಸಕರ ಭವನ ಕವಿಪ.
7. ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
8. ಆಂತರಿಕ ಆರ್ಥಿಕ ಸಲಹೆಗಾರರು, ಕವಿಮಂ.
9. ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತಕ್ಕೆ/ಬಿಡಿ ಪ್ರತಿ.